₹ 5/-

# ನೇಸರು

## ತಿಂಗಳೋಲೆ

PAGES 20

APRIL 2025 | Nesaru Tingalole | Vol. XLIII - 04

## ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ

## Mysore Association's Centenary Year (1926 - 2026)



ಅಸೋಸಿಯೇಷನ್ನಿನ ಶತಮಾನೋತ್ಸವದ ಆರಂಭಕ್ಕೆ ಮಹಾಕುಂಭಕ್ಕೆ ಭೇಟಿ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# Congratulations to Raghuram Sitaram!!!

Raghuram Sitaram is the son of our member Mrs.Lakshmi and Sitaram.

At the age of 11, he has acted in "Malgudi Days "."Swamy and Friends" as Mani, under the direction of Late Shankar Nag.



His first play was "Jaatre" in Mysore Association, Mumbai, under the direction of Dr. Manjunath. After that he has acted in many plays and for TV, for short films and a serial in Hindi.

From past 8 years he is in Canada, Toronto working as a software engineer. There also he has taken part in few plays in Hindi and English. He got a chance to act in a Kannada short film "Advitha" under the direction of Naveen Kumar in Canada. Here is something more about the film, "Advitha".

This year's Texas Kannada Short Films festival 2025, which is based in Huston, Texas saw 37 entries. These were all Kannada language short films produced by Kannadigas settled in the US and Canada. The entire cast and crew of all these films featured local talent, i.e. predominantly Kannadigas settled in this part of the world.




These films were screened in theatres across multiple cities across the US and Canada between October 2024 and Feb 2025. The festival concluded with an awards ceremony at a red-carpet event in Huston Texas on 1 March, 2025.

Many were well made, but the one movie that stood out was titled "Advaitha" made by the Toronto based film maker Naveen Kumar. This captivating story of the inner conflict that the protagonist Mahesha (enacted by Raghuram) has to deal with won 4 awards at the festival.

Advaitha was recognized as the Best Film. The 3 other awards included Best Director, Best Cinematography, and Best Actor (Critics) for Raghuram.

The film is available on YouTube here : https://www.youtube.com/watch?v=jeL4pQfmvXA&t=350s

ನೇಸರು ತಿಂಗಳೋಲೆ

ಸಂಪುಟ - 43 ಏಪ್ರಿಲ್- 2025 ಸಂಚಿಕೆ-4

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ಜೀವನದಲ್ಲಿ ಅಚಲವಾದ ನಂಬಿಕೆ ಮುಖ್ಯ



✍ ಡಾ. ಜ್ಯೋತಿ ಸತೀಶ್

ಜೀವನದಲ್ಲಿ ನಾವಿರಿಸಿರುವ ಅಚಲ ನಂಬಿಕೆ, ವಿಶ್ವಾಸ ನಮ್ಮನ್ನು ಮುಂದೆ ಸಾಗಲು ಪ್ರೇರೇಪಿಸುತ್ತದೆ. ಈ ಪ್ರಕೃತಿಯಲ್ಲಿ ವಾಸಿಸುವ ಪ್ರತಿಯೊಂದು ಜೀವಿಗೂ ಅಂತ್ಯವಿದ್ದೇ ಇದೆ. ನಾಳಿನ ಭಯಕ್ಕೆ ಇಂದಿನ ದಿನವನ್ನು ಬಲಿಕೊಡುವುದನ್ನು ಕಾಣುವುದಿಲ್ಲ. ಮುಂಜಾನೆಯ ಸೂರ್ಯನ ಕಿರಣಗಳ ಸ್ಪರ್ಶದಿಂದ ಕಣ್ಣು ತೆರೆಯುವ ಹೂವುಗಳಿಗೆ ತಾವು ಒಂದು ದಿನದ ಅತಿಥಿ, ಈ ಕ್ಷಣಿಕ ಸುಖಕ್ಕಾಗಿ ಯಾಕೆ ಅರಳಬೇಕು ಹಾಗೆ ಮುದುಡಿಕೊಂಡಿರುವ ಎಂದು ಯಾಕೆ ಅನಿಸುವುದಿಲ್ಲ. ಮೃಗ ಪಕ್ಷಿಗಳಂತೆ ಮನುಷ್ಯನಿಗೇಕೆ ನಿಶ್ಚಿಂತೆಯಿಂದ ಇರಲು ಸಾಧ್ಯವಿಲ್ಲ? ಈ ಸಂದರ್ಭದಲ್ಲಿ ನಾನೆಲ್ಲೋ ಓದಿದ ಕವಿತೆಯೊಂದು ನೆನಪಾಗುತ್ತದೆ.

"ಹಾರಾಡೋ ಪಕ್ಷಿಗಳ ಬಾನಲ್ಲಿ ನೀ ನೋಡು
ಬೀಜವ ಬಿತ್ತೋಲ್ಲಾ, ಕೂಡಿಸಿಡೋಲ್ಲ
ಹೊತ್ತೊತ್ತಿಗೆ ತುತ್ತು ಕೂಳನ್ನು
ನೀಡಲು ದೇವನು ಮರೆತಿಲ್ಲ" – (ಅನಾಮಿಕ)

ಮನುಷ್ಯನನ್ನು ಬಿಟ್ಟು ಮತ್ತೆಲ್ಲ ಪ್ರಾಣಿ ಪಕ್ಷಿಗಳು ತಮ್ಮ ಪಾಲಿಗೆ ಬಂದ ದಿನವನ್ನು ಭವಿಷ್ಯದ ಯೋಚನೆಯಿಲ್ಲದೆ ಆನಂದದಿಂದ ಅನುಭವಿಸುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಬದುಕಿನ ಬಗೆಗಿರುವ ಅಚಲವಾದ ನಂಬಿಕೆ. ನಾವು ಮನುಷ್ಯರು ನೂರಾರು ಕನಸುಗಳನ್ನು ಕಟ್ಟಿಕೊಂಡು ಜೀವನವನ್ನು ನಡೆಸಲು ಪ್ರಯತ್ನಿಸುತ್ತೇವೆ. ಅದರಲ್ಲಿ ನನಸಾಗದ ಕನಸುಗಳು ಹಲವಾರು. ನನಸಾದ ಕನಸಿನ ಬಗೆಗೆ ಚಿಂತಿಸದೇ ನನಸಾಗದ ಕನಸುಗಳತ್ತ ನಮ್ಮ ಚಿತ್ತವನ್ನು ಕೇಂದ್ರೀಕರಿಸಿಕೊಳ್ಳುತ್ತೇವೆ. ಅದರಲ್ಲೇ ದಿನವಿಡಿ ಕೊರಗುತ್ತೇವೆ. ನಮ್ಮ ಮಕ್ಕಳ, ಮೊಮ್ಮಕ್ಕಳ ಸುಭದ್ರ ಜೀವನವನ್ನು ಕಟ್ಟಿಕೊಡುವುದಕ್ಕಾಗಿ ವರ್ತಮಾನದ ನಮ್ಮ ದಿನವನ್ನು ಜಂಜಾಟದಲ್ಲಿ ಕಳೆಯುತ್ತೇವೆ.

ಜೀವನದಲ್ಲಿ ಏನೂ ಇಲ್ಲದ ನಿರ್ಗತಿಕರನ್ನು, ಬಡವರನ್ನು ನೋಡಿ, ಅವರ ಜೀವನಶೈಲಿಯನ್ನು ನೋಡಿದರೆ ನಿಜವಾದ ವಿಶ್ವಾಸ ಎನ್ನುವ ಪದದ ಅರ್ಥ ನಮಗರಿವಾಗುತ್ತದೆ. ಹುಟ್ಟಿಸಿದ ದೇವರು ಕೈಬಿಡುವುದಿಲ್ಲ ಎನ್ನುವ ಅಚಲ ನಂಬಿಕೆಯಿಂದ ಜೀವನವನ್ನು ಕಳೆಯುತ್ತಾರೆ. ಎರಡು ಕೈಯಿಲ್ಲ, ಕಾಲಿಲ್ಲದ ವ್ಯಕ್ತಿಗಳಲ್ಲಿರುವ ಆತ್ಮವಿಶ್ವಾಸವನ್ನು ನೋಡಿದರೆ ಸರ್ವಾಂಗಗಳು ಇರುವ ನಮಗೆ ನಮ್ಮ ದೌರ್ಬಲ್ಯದ ಅರಿವು ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ನಮ್ಮಲ್ಲಿರುವ ದೌರ್ಬಲ್ಯವೇ ನಮ್ಮ ಸಾಧನೆಗೆ ಮೆಟ್ಟಿಲನ್ನಾಗಿ ಬಳಸಿಕೊಳ್ಳಬೇಕು. ದೌರ್ಬಲ್ಯವನ್ನು ಮೆಟ್ಟನಿಲ್ಲಬೇಕೇ ಹೊರತು, ದೌರ್ಬಲ್ಯ ನಮ್ಮ ಅಸ್ತಿತ್ವವನ್ನೇ ಹೊಸಕಿ ಹಾಕುವುದಕ್ಕೆ ಅವಕಾಶ ನೀಡಬಾರದು. ಬಾಳಿನಲ್ಲಿ ನಮ್ಮ ಮನಸ್ಸಿನೊಳಗಿರುವ ವೈಕಲ್ಯವನ್ನು ನಿವಾರಿಸಿಕೊಳ್ಳುವುದು ಮುಖ್ಯ. ನಮ್ಮ ಸಾಧನೆಗೆ ನಮ್ಮ ದೌರ್ಬಲ್ಯಗಳು ಅಡ್ಡಿಯಾಗಬಾರದು, ಸಾಧಿಸಲೇಬೇಕೆಂಬ ಅದಮ್ಯ ಛಲವನ್ನು ಮೈಗೂಡಿಸಿಕೊಂಡರೆ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ."ಆಲೋಚನೆಗಳನ್ನು ಅವುಗಳ ಪಾಡಿಗೆ ಬಿಡಿ, ಜಯ ಪಡೆಯುವುದಕ್ಕೆ ಇದೊಂದೇ ದಾರಿ" ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಈ ಸಂದರ್ಭದಲ್ಲಿ ನೆನೆಯೋಣ. ದೇವರು ಅವರವರ ಅರ್ಹತೆಗೆ ತಕ್ಕಂತೆ ಭಾಗ್ಯವನ್ನು ದಯಪಾಲಿಸಿದ್ದಾನೆ. ಪಾಲಿಗೆ ಬಂದದ್ದು ಪಂಚಾಮೃತ ಎಂದುಕೊಂಡು ಬದುಕನ್ನು ನಡೆಸಿದರೆ, ಯಾವ ನೋವು, ನಿರಾಶೆಗಳಿಗೆ ಆಸ್ಪದವಿರುವುದಿಲ್ಲ.

# ಮೈಸೂರು ಅಸೋಸಿಯೇಷನ್ ಬೆಳ್ಳಿ ಹಬ್ಬದಿಂದ ಬಂಗಾರದ ಹಬ್ಬಕ್ಕೆ ನಡೆದು ಬಂದ ದಾರಿಯ ಸಿಂಹಾವಲೋಕನ

✍ ಬಾನಾಡಿ

1952 ರಂದು ಬೆಳ್ಳಿ ಹಬ್ಬ ಆಚರಿಸಿದೆವು. ಅಂದಿನ ಸಡಗರ, ನಡೆಸಿದ ಕಾರ್ಯಕ್ರಮಗಳು ಮನದಲ್ಲಿ ಹಚ್ಚು ಹಸುರಾಗಿದೆ. ಆಗಿನ ಮೈಸೂರನ್ನಾಳಿದ ಇಂದು ಕಣ್ಮರೆಯಾಗಿರುವ ಶ್ರೀಮಾನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರಿಗೆ ಅಂದಿನ ನಮ್ಮ ಅಸೋಸಿಯೇಶನ್ ಸದಸ್ಯರು ಮತ್ತು ನೆರೆಹೊರೆಯ ಜನರು ಇತ್ತ ಅದ್ಭುತ ಸ್ವಾಗತ, ಬಡವ ಬಲ್ಲಿದರೆಂಬ ಬೇಧವಿಲ್ಲದೆ, ಕೆಲಸಗಾರರಿಗೂ ಅವರು ಕೊಟ್ಟ ಹಸ್ತ ಲಾಘವ ಮುಂಬಯಿ ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾಗಿತ್ತು. ಯಾವುದೇ ರೀತಿಯ ಆಡಳಿತ ನಿರ್ಬಂಧಗಳಿಲ್ಲದೆ ಶ್ರೀ ಮಹಾರಾಜರು ಎಲ್ಲರೊಡನೆ ಬೆರೆತು, ಎಲ್ಲರ ಯೋಗಕ್ಷೇಮ ವಿಚಾರಿಸಿಕೊಂಡು, ಎಲ್ಲರೊಡನೆ ಊಟಮಾಡಿದ ದೃಶ್ಯ ಚಿರಸ್ಮರಣೀಯವಾಗಿದೆ. ಈಗಿನಂತೆ ಆಗಲೂ ಕಲಾ ವಿಭಾಗದವರು ಪ್ರದರ್ಶಿಸುತ್ತಿದ್ದ ನಾಟಕಗಳು, ವಿವಿಧ ಮನೋರಂಜನೆ ಕಾರ್ಯಕ್ರಮಗಳು, ಅಸೋಸಿಯೇಶನ್ ಕ್ರೀಡಾ ಪಟುಗಳು ನಡೆಸುತ್ತಿದ್ದ ಆಟಗಳ ಸ್ಪರ್ಧೆಗಳು ಉತ್ತಮ ಮಟ್ಟದಲ್ಲಿದ್ದವು.

ನಾನು ಸದಸ್ಯನಾಗಿ ಅಸೋಸಿಯೇಶನ್‌ಗೆ ಕಾಲಿಟ್ಟದ್ದು 1950ರಲ್ಲಿ ಅನಂತರ ಸುಮಾರು 5-6 ವರ್ಷಗಳು ಅನೇಕ ಕನ್ನಡ ನಾಟಕಗಳನ್ನಾಡಿದೆವು. ಶ್ರೀಯುತರಾದ ಕುಟ್ಟಿ, ಜಯಭೀಮ, ಪುಟ್ಟಣ್ಣಯ್ಯ, ಬಿ.ಜಿ.ಆಚಾರ್, ಶಂಕರ ನಾರಾಯಣ ರಾವ್, ಲಕ್ಷ್ಮೀರಮಣ, ಆನಂದಂ, ಇವರೆಲ್ಲಾ ನನಗಿಂತ ಕೆಲವು ವರ್ಷ ಹಳೆಬರು. ಆಗ ನಾವಾಡಿದ ಕೆಲವು ನಾಟಕಗಳು ಮಾತ್ರ ನೆನಪಿನಲ್ಲಿವೆ. ಅವು ಶ್ರೀಯುತ ಪುಟ್ಟಣ್ಣಯ್ಯನ "ಭಂಡಬಾಳು", "ನರಕದ ನ್ಯಾಯ", "ಬಹದ್ದೂರು ಗಂಡ", ವೈದ್ಯನ ವ್ಯಾಧಿ" ಮುಂತಾದ ಕೆಲವು ಕೈಲಾಸಂ ನಾಟಕಗಳು.

ಅನಂತರ ಬಂದ ಶ್ರೀ ರಾಮಚಂದ್ರ ಮೂರ್ತಿ ನಮ್ಮ ನಾಟಕಗಳಿಗೇ ಹೊಸ ಜೀವ ತುಂಬಿದರು. ಆಗಲೇ ಕೆಲವು ಹೆಂಗಸರು ನಾಟಕಗಳಲ್ಲಿ ಪಾತ್ರವಹಿಸಲು ಮುಂದೆ ಬಂದರು. ಶ್ರೀಮತಿಯವರಾದ ಸುಶೀಲಾ ರಾವ್, ಲಕ್ಷ್ಮೀ ಸ್ವಾಮಿ ಮುಂತಾದವರು ನಮ್ಮ ಅಸೋಸಿಯೇಶನ್ ರಂಗಮಂಚಕ್ಕೆ ಹೊಸ ಮೆರುಗು ಕೊಟ್ಟರು.

ಶ್ರೀಯುತರಾದ ಎಂ. ಎನ್. ರಾಮಚಂದ್ರ ರಾವ್, ಪದ್ಮನಾಭ, ಶಂಕರನಾರಾಯಣ ಇವರೆಲ್ಲಾ ಅಸೋಸಿಯೇಶನ್ ಕಲಾ ವಿಭಾಗದ ಪ್ರೌಢಿಮೆಯನ್ನು ಅತಿಶಯಗೊಳಿಸಿದರು.

ಮುಂದೆ ಕೆಲವು ವರ್ಷಗಳು ಅಸೋಸಿಯೇಶನ್ ಕಟ್ಟಡದ ಊರ್ಜಿತ ಕೆಲಸ ನಡೆಯುತ್ತಿದ್ದುದರಿಂದಲೋ ಏನೋ, ಚಟುವಟಿಕೆಗಳು ತೀರ ಕಡಿಮೆಯಾದವು. 10-12 ಕಾರ್ಯಕ್ರಮವಾಗುತ್ತಿದ್ದುದು, ಕೇವಲ ವರ್ಷಕ್ಕೆ ಒಂದು ಕಾರ್ಯಕ್ರಮ ನಡೆಯುವುದು ಕಷ್ಟವಾಯಿತು. ಯಾವುದೇ ಸಂಘ ಸಂಸ್ಥೆಯ ಜೀವ ಮಾನದಲ್ಲಿ ಹಲವಾರು ಏರಿಳಿತಗಳಿರುವು ಸ್ವಾಭಾವಿಕವಲ್ಲವೇ?

ಈಗ ಸುಮಾರು 7-8 ವರ್ಷಗಳಿಂದ ನಗರದ ಪ್ರಮುಖ ಕನ್ನಡ ಸಂಸ್ಥೆಗಳಲ್ಲೊಂದಾದ ಕನ್ನಡ ಕಲಾಕೇಂದ್ರದ ವಾರ್ಷಿಕ ನಾಟ್ಯ ಮಹೋತ್ಸವದಲ್ಲೂ ಮೈಸೂರು ಅಸೋಸಿಯೇಶನ್ ಕಲಾ ವಿಭಾಗ ಭಾಗವಹಿಸುತ್ತಾ ಬಂದಿದೆ. "ತನು ನಿನ್ನದು ಮನ ನಿನ್ನದು", "ವರ್ಣಾಂಧ", "ಗಂಡಾಂತರ", "ನಂದಿಮಹಾಲ್", "ನಂ ಕಂಪ್ನಿ", "ಹಯವದನ" ಮತ್ತು "ಬೆಕ್ಕಿನ ಕಣ್ಣು" ನಾಟಕಗಳನ್ನಾಡಿ ಕಲಾ ವಿಭಾಗ ತನ್ನ ಗೌರವವನ್ನು ಕಾಯ್ದುಕೊಂಡಿದೆ. 'ಬೆಕ್ಕಿನ ಕಣ್ಣು' ಮತ್ತು 'ಆ ರಾತ್ರಿ' ನಾಟಕಗಳಂತೂ ಹಲವು ಬಾರಿ ಕಿಕ್ಕಿರಿದ ಜನ ಸಮೂಹಕ್ಕೆ ಪ್ರದರ್ಶಿಸಲ್ಪಟ್ಟಿವೆ ಅಲ್ಲದೆ ಬೆಂಗಳೂರು ನಗರದಲ್ಲೂ ಯಶಸ್ವಿಯಾಗಿ ಪ್ರಯೋಗಿಸಲ್ಪಟ್ಟಿವೆ. ಅಸೋಸಿಯೇಶನ್‌ನ ಚರಿತ್ರೆಯಲ್ಲಿ ಇದೊಂದು ದಾಖಲೆ.

ಕಳೆದ ಎರಡು ವರ್ಷಗಳಲ್ಲಿ ಕಲಾವಿಭಾಗದವರು ನಡೆಸಿದ ಚಟುವಟಿಕೆಗಳ ಪಟ್ಟಿ ಮಾಡಲು ಹೊರಟರೆ ಅದು ಹನುಮಂತನ ಬಾಲವಾಗಬಹುದು. ಬಹುಮುಖ್ಯ ಅಂಶವೆಂದರೆ ನಮ್ಮ ಚಟುವಟಿಕೆಗಳು ಕೇವಲ ನಮ್ಮ ಸದಸ್ಯರಿಗೆ ಮಾತ್ರವಾಗಿರದೆ ಅವು ನಗರದ ಎಲ್ಲಾ ಕನ್ನಡಿಗರೂ ಭಾಗವಹಿಸುವಂತಾದುದು. ಕಳೆದ ಜನವರಿ ತಿಂಗಳಲ್ಲಿ ನಡೆಸಿದ ಅಂತರ ಕಾಲೇಜು ಏಕಾಂಕ ನಾಟಕ ಸ್ಪರ್ಧೆ, ಅನಂತರ ಶಾಲಾ ಮಕ್ಕಳಿಗಾಗಿ ನಡೆಸಿದ ಚಿತ್ರಕಲಾ ಸ್ಪರ್ಧೆ, ಲೇಖನ ಸ್ಪರ್ಧೆ ಮುಂತಾದವೇ ಸಾಕ್ಷಿ. ಇನ್ನೂ ಮುಂದುವರೆದು ಹೊರನಾಡಿನಿಂದ ಅನೇಕ ಸಂಗೀತಗಾರರನ್ನೂ, ಬೇರೆ ಸಂಘಗಳಿಂದ ನಾಟಕಕಾರರನ್ನೂ ಕರೆಸಿಕೊಂಡು ನಮ್ಮ ಸದಸ್ಯರಿಗೆ ಪರಿಚಯ ಮಾಡಿಸಿದ್ದು ಅಸೋಸಿಯೇಶನ್ ಆವರಣದಲ್ಲಿ ಪ್ರಬುದ್ಧ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದು ಅಸೋಸಿಯೇಶನ್ ಚರಿತ್ರೆಯಲ್ಲೇ ಒಂದು ನೂತನ ಅಧ್ಯಾಯ. ಈ ವರ್ಷದ ಕಡೇ ಕಾರ್ಯಕ್ರಮದ ಅಂಗವಾಗಿ "ರಂಗೋಲಿ ನ್ಯಾಯ" ಎಂಬ ನಾಟಕವನ್ನೂ ಮತ್ತು ಶ್ರೀಯುತ ಕಿಶೋರ್ ಕುಮಾರ್‌ರವರ ಸಂಗೀತವನ್ನೂ ಏರ್ಪಡಿಸಿದ್ದೇವೆ. ಅಲ್ಲದೆ ಕರ್ಣಾಟಕದ ವಿಖ್ಯಾತ ಲೇಖಕರೂ ಮತ್ತು ಕವಿಗಳ ಗೋಷ್ಠಿ ನಡೆಯಲಿದೆ. ನಮ್ಮ ಎಲ್ಲಾ ಕಾರ್ಯಕ್ರಮಗಳಂತೆ ಇವೂ ಯಶಸ್ವಿಯಾಗುವುದೆಂದು ಭರವಸೆಯಿದೆ.

# Golden Jubilee Year Programme

✍ H S SRINIVAS

“The Mysore Association Bombay" the Inspiring name for Kanndigas of Bombay has completed fifty years of meritorious service to its members and the community of this great city. The General Body of the Association in historic special meeting on 9th November, 1975 declared the year 1976 the Golden Jubilee Year" and unanimously endorsed the Managing Committee's proposal for yearlong programme in a befitting & unique manner. In accordance with the directive of the General Body, the Managing Committee carefully chalked out month wise Special Programmes to highlight the spheres of activities of the Association. A brief report of the programmes conducted during the Golden Jubilee Year is as under.



Inaguaration of the golden jubilee year by shri B.L.Cariappa

In the month of January, the Golden Jubilee Programmes started with a big bang, with "The Golden Jubilee Inter-Collegiate Kannada Drama Competition" open to the Colleges affiliated to the University of Bombay under the Chairmanship of Shri B. C. Cariappa, then Chairman of Maharashtra State Electricity Board. A rolling Silver Shield was instituted for this competition in the name of the Late Patron of the Association Shri Jayachamaraja Wodeyar. Twelve troupes from various Colleges exhibited their talents. The Competition spanned over for five days. On the Final day prizes for the winners were distributed by



A scene from "Bekkina Kannu"




Sri Jayachamarajendra Kannada "One Act Play Competition"

the Mayor Shri Nanalal D. Mehta and the Association's prestigious Drama "Bekkina Kannu" was enacted by its members. Sri L D Char of Standard Batteries donated the prizes.

The Silver Jubilee Basket-Ball Tournament one of the premier tournaments of this city, which could not take place during the past few years was revived in the month of February under the

new banner "Golden Jubilee Basket Ball Tournament" thrown open to all teams of Bombay in the categories of Men, Women & Boys, as many as forty teams participated in the tournament. After the exciting finals on the last day, prizes were distributed by Prof. Chandgadkar, former Secretary, Cricket Control Board of India. In addition to the Basket-Ball Tournament, the month of February also saw Sriranga's famous drama "Samagra Manthana" ably presented by Karnataka Theatres, Bombay.



Golden jubilee floodlit basketball Tournament


In the month of March, the Association was a bit busy with its Annual General Body Meeting. Even then, the ever-enthusiastic Fine Arts Troupe came out with Lankesh's widely acknowledged Play "Giliyu Panjaradolilla" to mark the start of the spring season of the Golden Jubilee year.

The month of April was a musical month. Two great instrumental concerts were arranged during the month. The first one was the 'Classical Concert by Shri Shaikh Hussain Sahib of Hyderabad and the second one was a scintillating flute recital by Shri Vijaya Raghava Rao, a well-known maestro. Another important event of the Association was the Bridge Tournament in which over 200 persons participated.




Seminar on Management

As April was a Musical month, May was the rhythmical month. One programme was an impressive puppet show in Yakshagana style by Shri Koggonna Kamath of Coondapur and another was a well-coordinated Bharata Natya recital by the two sisters Kum. Anupama and Kum. Hema Rao.



Felicitation Shri Ratnappa Kumbhar

With the onset of Monsoon, the Association had to be content with indoor activities only. In the month of June, a thrilling musical night by famous Mahesh Kumar & Party and popular Cine stars both from Hindi and Kannada Screens were presented to jam packed audiences at the mammoth Shanmukhananda Hall. This show also boosted the economy of the Association. Hon. Minister of Maharashtra Shri Udaysingrao Gaekwad graced the occasion.



Sri Swarna Gowri and Sri Maha Ganapathi

In the month of July, the Association stepped into an adventure of arranging a Technical Seminar on "The need for self-generation of Technology and Management methods in India". Many eminent speakers from various fields participated in the session and revealed several authentic data over Science, Technology and Management Methods in India. Dr. S K. Somaiya, a noted Industrialist and educationist chaired the session and summed up the proceedings stressing the need for indigenous development in the fields of Technology and Education. In the same month, a Kannada Play "Parijata" was presented by Suvarnadhwani.

The long-awaited Kannada Film festival came through in the month of August. Three award winning Kannada film's "Bootayyana Maga Ayyu", 'Samskara and "Katha Sangama" were screened to Housefull audience at Shanmukhananda Hall. Hon. Ministers of Maharashtra Shri Ratnappa Kumbhar, Smt. Pratibha Patil, Shri Susheel Kumar Shinde and a noted film actress Smt. Rakhee took part in the festival. The Maharashtra Government was generous enough to exempt entertainment tax for two films.



Inauguration of Kannada Film Festival by Smt. Rakhee



Shri Joginder Singh handing over the Karanataka Sports Council Donation

Of course, the month of September is reserved for the yearly feature "Maha Ganapathi Festival". This time the festival was performed with added glitter. The special programmes to mark the Golden Jubilee Year included Hindustani Vocal recital by Padmabhushana Sri. Bhimsen Joshi, Sitar recital by Shri. Shamim Ahmed Khan, Bharatanatya by Indira Muthanna and Karnataka Music by S. K. Vasumati of Mysore, along with a Kannada play of T Prasanna “Grihastashrama" presented by the Association. An open




Smt. Pratibha Patil addressing in Kannada

Table Tennis Tournament was also conducted during the month of September. The grand success of this tournament is due to wholehearted cooperation of the Maharashtra Table Tennis Association. Sri. B V S Iyengar Donated the prizes.

During the month of August and September essay, elocution competition in the languages of Kannada, English, Marathi and Gujarati and Painting competition were held for school children. The response was quite encouraging. A Kannada play "shule" was also enacted by the Fine Arts Troupe during September.


Felicitation to Shri Sushilkumar Shinde

Encouraged by the thunderous success of the various programmes, the Association took an uphill task of conduction "Golden Jubilee Art Competition and Exhibition" in the month of October. The unreserved co-operation from the Bombay Arts Society came as a boon to us. More than three hundred entries came in various disciplines. The exhibition lasted for seven days. Hon. Minister of Karnataka Shri. R. Gundu Rao distributed the prizes to the winners. The prizes were donated by Mrs. Dimple Khanna. During this month open Carrom Tournament was also conducted successfully. This again is due to the whole hearted cooperation of the Maharashtra Carrom Association.

Another unique event of the Association during the month of November was the presentation of two Kannada dramas in the city of Bangalore. The huge Fine Arts Troupe of the Association travelled all the way to Bangalore to enact two of our successful dramas “Aa Ratri” and “Bekkina Kannu” which were appreciated both by public and press. The Association left along lasting memories in the minds of the art lovers of the capital city of Karnataka. The shows were sponsored by Karnataka Nataka Academy. All India Women’s Council and Marenahalli Laxmi Narasimha Temple Trust.


Shri K. S. Ashwat in the Golden Jubilee Art Exhibition

Many distinguished personalities visited the Association during the Golden Jubilee Year and appreciated the activities of the Association. To name a few Dr. Ranganatha Diwakar, G B Joshi noted literary laurates, Shri Joginder Singh, Secretary youth service Karnataka State, Shri K S Ashwath, Shri Udaykumar, Shri Srinath, Smt. Manjula famous Kannada Cine Star and the list is lengthy.

During the whole year, the cooperation from the press, public and members was spontaneous and wholehearted. As we near to end of the year, we look forward for the successful celebrations during “Grand Finale” on 4th and 5th December 1976.

We trust the year 1976 will be long remembered as “GOLDEN YEAR OF THE ASSOCIATION’

# ಕರ್ನಾಟಕ ನಾಟಕ ಅಕಾಡೆಮಿ, ಮೈಸೂರು ಅಸೋಸಿಯೇಷನ್, ಬಸವೇಶ್ವರ ಫಿಲಾಸಫಿಕಲ್ ಸೊಸೈಟಿ ಮತ್ತು ಕನ್ನಡ ಕಲಾ ಕೇಂದ್ರ ಜತೆಗೂಡಿ ಜರುಗಿಸಿದ ನಾಟಕೋತ್ಸವ



ಇದೇ ಮಾರ್ಚ್ 22 ಮತ್ತು 23 ರಂದು ಕರ್ನಾಟಕದಿಂದ ಯುವ ಕಲಾವಿದರು ಮೂರು ನಾಟಕಗಳನ್ನು ತೋರಿದರು.

ನಾಟಕೋತ್ಸವದ ಉದ್ಘಾಟನೆಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆ.ವಿ ನಾಗರಾಜ್ ಮೂರ್ತಿಯವರು, ಕರ್ನಾಟಕದ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಸೋಮಣ್ಣನವರು, ಬಸವೇಶ್ವರ ಫಿಲಾಸಫಿಕಲ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಮನೋಹರ ಕೋರಿಯವರು, ಕನ್ನಡ ಕಲಾಕೇಂದ್ರದ ಅಧ್ಯಕ್ಷರಾದ ಶ್ರೀ ಮಧುಸೂದನ್, ಮೈಸೂರು ಅಸೋಸಿಯೇಷನ್ನಿನ ಉಪಾಧ್ಯಕ್ಷರಾದ ಶ್ರೀ. ಉಮೇಶ್ ಮಾಸ್ಕೇರಿ ಹಾಗೂ ಡಾ. ಬಿ. ಆರ್. ಮಂಜುನಾಥ್ ಅವರು ಭಾಗವಹಿಸಿ, ದೀಪವನ್ನು ಬೆಳಗಿಸಿ ಮೊದಲು ಮಾಡಿದರು.



ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ನಿರ್ಮಲಾ ಮಠಪತಿಯವರು ಸ್ವಾಗತವನ್ನು ಕೋರಿ, ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಪರಿಚಯ ಮಾಡಿದರು. ಆ ನಂತರ ಮೈಸೂರು ಅಸೋಸಿಯೇಷ್‌ನ ಡಾ. ಮಂಜುನಾಥ್‌ರವರು ಮಾತನಾಡಿ, ಹೊರನಾಡ ಕಲಾಭಿವೃದ್ಧಿಯಲ್ಲಿ ಮುಂಬಯಿಯ ಕನ್ನಡಿಗರ ಕೊಡುಗೆಗಳನ್ನು ಪರಿಚಯ ಮಾಡಿಸಿದರು.

ಶ್ರೀ ಕೆ. ವಿ. ನಾಗರಾಜ ಮೂರ್ತಿಯವರು ಮಾನವರನ್ನು ಮಾನವರಂತೆ ಬೆಳೆಸಲು, ಅಂತೆಯೇ ಹಿಂದಾದ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ರಂಗಭೂಮಿ ನೀಡುತ್ತಿರುವ ನಾಟಕೋತ್ಸವಗಳಿಂದ ಉತ್ತಮ ಸಂದೇಶಗಳನ್ನು ಸಾರಲು ಸಾಧ್ಯವಾಗುತ್ತದೆ. ಅದೇ ಕರ್ನಾಟಕ ನಾಟಕ ಅಕಾಡೆಮಿಯ ಗುರಿ. ಅಂತೆಯೇ ಹೊರನಾಡಿನಲ್ಲಿ ಮೈಸೂರು ಅಸೋಸಿಯೇಷನ್ ಒಂದು ಶತಮಾನದಿಂದ ಕನ್ನಡ ಸಂಸ್ಕೃತಿಗಾಗಿ ದುಡಿಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಅದು ಕನ್ನಡನಾಡಿನ ಹೆಮ್ಮೆಗೆ ಪಾತ್ರವಾಗಿದೆ. ಅಂತೆಯೇ ಕಳೆದ 70 ವರ್ಷಗಳಿಂದ ರಂಗಭೂಮಿಗೆ ದುಡಿಯುತ್ತಿರುವ ಕನ್ನಡ ಕಲಾ ಕೇಂದ್ರ, ಬಶವೇಶ್ವರರ ಸಂದೇಶವನ್ನು ಹೊರನಾಡಿನಲ್ಲಿ ಸಾರುತ್ತಿರುವ ಬಸವೇಶ್ವರ ಫಿಲಾಸಫಿಕಲ್ ಸೊಸೈಟಿಯ ಪಾತ್ರಗಳನ್ನು ಹೊಗಳಿದರು.




ಶ್ರೀ ಸೋಮಣ್ಣನವರು ಮಾತನಾಡಿ ಹೊರನಾಡಿನಲ್ಲಿ ಕನ್ನಡ ಸಂಸ್ಕೃತಿಯನ್ನು ಬೆಳೆಸುತ್ತಿರುವ ಮೈಸೂರು ಅಸೋಸಿಯೇಷನ್ ತನ್ನ ಶತಮಾನೋತ್ಸವದಲ್ಲಿ ಯಾವ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದರೂ ಕನ್ನಡ ಗಡಿನಾಡು ಅಭಿವೃದ್ಧಿ ಪ್ರಾಧಿಕಾರ, ತನ್ನ ಸಂಪೂರ್ಣ ಸಹಕಾರವನ್ನು ನೀಡುತ್ತದೆ ಎಂದು ಭರವಸೆಯನ್ನಿತ್ತರು.

ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯೆ ಶ್ರೀಮತಿ ಮಮತಾ ಅರಸೀಕೆರೆಯವರು ಮಾತನಾಡಿ ನಾಟಕೋತ್ಸವದಲ್ಲಿ ಭಾಗವಹಿಸುತ್ತಿರುವ ಎಲ್ಲಾ ತಂಡಗಳ ನಿರ್ದೇಶಕರನ್ನು ಪರಿಚಯಿಸಿ ಅವರಿಗೆ ಸನ್ಮಾನವನ್ನು ನೀಡಿದರು.



ಮೊದಲನೆಯ ನಾಟಕ, ಶ್ರೀ ಚಂದ್ರಶೇಖರರು ಬರೆದ 'ಶಿವರಾತ್ರಿ' ಬೆಂಗಳೂರಿನ ರಂಗಭಾರತಿ ತಂಡದವರು, ಶ್ರೀ ಜಗದೀಶ್‌ಜಾಲ ಅವರ ನಿರ್ದೇಶನದಲ್ಲಿ ಅಭಿನಯಿಸಿದರು. ಶಿವ ಶರಣರು ಸೂಳೆಯರಾಗಲಿ, ಕಳ್ಳರಾಗಲಿ ಎಂದೂ ಸುಳ್ಳನಾಡಿ ಹೊಟ್ಟೆ ಹೊರೆಯುವರಲ್ಲ ಎಂದು ಸಾರುವ ಸಂದೇಶ ಈ ನಾಟಕದಲ್ಲಿ ಮಿನುಗಿತು. ಅಭಿನಯದಲ್ಲಿ ಸೂಳೆಯ ಪಾತ್ರಿ ಹಾಗೂ ಶರಣರ ಪಾತ್ರ ಚೆನ್ನಾಗಿತ್ತು. ಒಳ್ಳೆಯ ಸಂದೇಶವನ್ನು ಜನರಿಗೆ ಮುಟ್ಟಿಸುವುದರಲ್ಲಿ ಈ ಪ್ರದರ್ಶನ ಯಶಸ್ವಿಯಾಗಿತ್ತು. ಎರಡನೆಯ ದಿನ ಭಾನುವಾರ ಬೆಳಿಗ್ಗೆ 'ಅಶ್ವಪರ್ವ'ವನ್ನು ದಕ್ಷ ತರಂಗ ನಾಟಕ ತಂಡ ತೋರಿ, ನೋಡುಗರ ಮನ ಗಳನ್ನು ಸೂರೆಗೊಂಡಿತು. ಕುಮಾರ ವ್ಯಾಸನೆಂದು ಹೆಸರಾದ ಗದುಗಿನ ನಾರಾಯಣಪ್ಪನವರು ರಚಿಸಿದ ಮಹಾಭಾರತದಲ್ಲಿ ಅಶ್ವತ್ಥಾಮನ ಪಾತ್ರ ಏಕೆ ಹಾಗೆಯೇ ನಿಂತಿತು? ಅವನು ಚಿರಂಜೀವಿಯೇ ಎನ್ನುವ ಪ್ರಶ್ನೆಗಳನ್ನು ಎತ್ತಿ ಅದರ ಉತ್ತರ ನೀಡಲು ಪ್ರಯತ್ನಿಸಿದ ಈ ನಾಟಕ ಅಭಿನಯ ರಂಗವಿನ್ಯಾಸ ಹಾಗೂ ನಿರ್ದೇಶನಗಳ ಹೆಗ್ಗಳಿಕೆಯನ್ನು ಪಡೆಯಿತು. ನೋಡುಗರ ಮನದ ಮೇಲೆ ಈ ನಾಟಕ ಅಚ್ಚಳಿಯದೇ ನಿಂತಿದೆ.





ಎ. ಎನ್. ಪುನೀತರು ತಮ್ಮ ಮುಂದಿನ ನಾಟಕಗಳಲ್ಲಿ ಇನ್ನೂ ಹೆಚ್ಚಿನ ಕೊಡುಗೆಯನ್ನು ನೀಡುವರೆಂದು ಭಾವಿಸಿದ್ದೇವೆ.

ಮೂರನೆಯ ನಾಟಕ 'ಕಿಂಡಿ' ಕನಕದಾಸರ ಉಡುಪಿಯ 'ಕಿಂಡಿ' ಯನ್ನು ಹೊಸದಾಗಿ ತೋರುವ ಪ್ರಯತ್ನವನ್ನು ಮಾಡಿತು. ಎಲ್ಲೆಲ್ಲೂ ಇರುವ ಕೃಷ್ಣನನ್ನು ನೋಡಲು ಹೋಗಿ ಶಿಕ್ಷೆಗೆ ಒಳಗಾದರೂ ಸಂಯಮವನ್ನು ಕಳೆದುಕೊಳ್ಳದ ಭಕ್ತ, 'ಕಿಂಡಿ' ಯಲ್ಲಾದರು ಅವನನ್ನು ನೋಡುವ ಭಾಗ್ಯ ಪಡೆಯುತ್ತಾನೆ. ಆದರೆ ಆಧುನಿಕ ಪ್ರಪಂಚದಲ್ಲಿ ಈ ನೀತಿಯನ್ನು ಸಾರುವಾಗ, ನಾಟಕ ನೋಡುಗರನ್ನು ರಂಜಿಸಲು, ಬೇಡದ ಪಾತ್ರ ಮತ್ತು ಅಭಿನಯವನ್ನು ಒಳಗೊಂಡಿದ್ದು ಮುಂಬಯಿಯ ರಂಗ ಭೂಮಿಯ ನೋಡುಗರಿಗೆ ಅದು ಅಷ್ಟು ಹಿಡಿಸಲಿಲ್ಲ. ಆದರೆ ಯುವ ಕಲಾವಿದರ ಅಭಿನಯವನ್ನು ಯಾರು ಅಲ್ಲಗಳೆಯುವಂತಿರಲಿಲ್ಲ.



ಮೂರು ನಾಟಕಗಳು ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಎತ್ತಿ ತೋರಿದವು.

# *Award Presenting Ceremony*









On 8th March 2025, The Mysore Association held a ceremony for presenting the awards to the winners of music competition which was held on 26th August 2024.

The competition itself held in 4 different categories one was mainly classical singing the other three were Janapada, Bhavageete and Dasarapada. In each category, participants were further classified in 3 age groups – 7 to 10, 11 to 14, 15 to 18. In all there were 24 winners. Some of them showcased their talent to the audience by presenting 2 songs of their choice which was very much appreciated by the listeners. The President, Vice president and senior members of the Committee gave away the prizes to the winners with their blessings. It was pleasant experience to all.









# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7063
Website: www.mysoreassociation.in E-mail: mysoreassociation.mumbai@gmail.com

## ಮೈಸೂರು ಅಸೋಸಿಯೇಷನ್ ನೂರರ ನಲಿವು 1926-2026

ಮಾರ್ಚ್ 06, 2025

## ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ - 2025

# ಶತಮಾನೋತ್ಸವ ಪ್ರಶಸ್ತಿ

ಅಸೋಸಿಯೇಷನ್ ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ **"ಶತಮಾನೋತ್ಸವ ವಿಶೇಷ"** ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ.

ಈ ಸ್ಪರ್ಧೆಯಲ್ಲಿ ಭಾರತದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರು ಯಾವುದೇ ವಿಷಯದ ಕುರಿತು ಏಕಾಂಕ ನಾಟಕವನ್ನು ರಚಿಸಬಹುದು.

### ಏಕಾಂಕ ನಾಟಕ ರಚನಾ ಸ್ಪರ್ಧೆ

| | | |
|---|---|---|
| **ಪ್ರಥಮ ಬಹುಮಾನ** | - | **ರೂ. 50,000/-** |
| **ದ್ವಿತೀಯ ಬಹುಮಾನ** | - | **ರೂ. 30,000/-** |
| **ತೃತೀಯ ಬಹುಮಾನ** | - | **ರೂ. 20,000/-** |

### ಸ್ಪರ್ಧೆಯ ನಿಯಮಾವಳಿಗಳು:

- ★ ಏಕಾಂಕ ನಾಟಕ ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ★ ಸ್ಪರ್ಧೆಗೆ ಕಳುಹಿಸಿದ ನಾಟಕಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ★ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ನಾಟಕವನ್ನು ಕಳುಹಿಸುವಂತಿಲ್ಲ.
- ★ ಸ್ಪರ್ಧೆಗೆ ಬಂದ ನಾಟಕವನ್ನು ಮರಳಿಸಲಾಗುವುದಿಲ್ಲ.
- ★ ನಾಟಕವು 30 ಪುಟಗಳನ್ನು ಮೀರಬಾರದು. ನಾಟಕವನ್ನು ಪ್ರದರ್ಶಿಸಿದರೆ 45-50 ನಿಮಿಷಗಳೊಳಗೆ ಮುಗಿಯುವಂತಿರಬೇಕು.
- ★ ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ 'ಇ-ಮೇಲ್'ಗೆ ಕಳುಹಿಸಬಹುದು.

  **nataka.nesaru@gmail.com**
- ★ ಬರೆದವರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ★ ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ★ ನಾಟಕವು ನಮ್ಮ ಕೈ ಸೇರುವ ಕೊನೆಯ ದಿನಾಂಕ : ಜೂನ್ 30, 2025
- ★ ಆಯ್ಕೆಯಾದ, ನಾಟಕಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.

Postal Address:

**The Mysore Association, Bombay**
393, Bhau Daji Road, Matunga (Central), Mumbai - 400019
Tel: 022 - 2403 7065 (M) – 83697 88157 (ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)

# Memories of an old Member

✍ SRI A. NAGABHUSHANA RAU

What a rare pleasure and privilege it is to be a jubilant participant in Golden Jubilee of the Mysore Association with which one has been associated from almost its early years.

1929 January was my first contact with the Association, a struggling infant then, tenderly reared by its Chief Architect, that towering personality to whom no Mysorean in Bombay was ever a stranger.

Rajakaryaprasakta Dewan Bahadur K. Ramaswamy to whose unbounded enthusiasm, leadership and generosity we owe the birth of the Association. With a band of devoted colleagues like N. S. Gubbi, S. Krishnappa & S Ramaiah alas all now merged with the infinite. Mr. S. Ramaswamy. who is fortunately with us and a few others of the Association were ushered in. Like unto the birth of mighty rivers, the Association then housed a single room in Vejbhai Building, Matunga, has now grown into a prestigious institution in Bombay, with its own three storied building buzzing with activity. the cynosure of neighbouring eyes as well as their envy. What a glorious transformation from the humble beginning. The Association then as now was the common meeting place for all Mysoreans in Bombay from Kalyan to Colaba, from Antop hill to Juhu, as much to the new adventurers as to the old settlers.

It was a cultural centre promoting social contacts among the members of different parts of the sprawling islands, reflecting the glory of Mysore Variety of Ways. The atmosphere was so homely that fresher hardly realised he was out of his parent State.

Activities were manifold. Music performances by artists from Mysore both renowned and not so renowned too or Hari Keertanas were a monthly feature held either in Byramjee Jeejibhoy or Napoo Hall-The occasion being used as a fruitful venue to collect the monthly subscription (arrears not being rare).

Now and then the members staged dramas like Nirupama (a masterpiece of the maestro late A. V. Varadachar at the Damodar Thackeray Hall, Parel, or Kailasam's skits. I remember K. N. Seshan (late), and Swamy (recently retired from Bombay Police Service) featuring in classical dramas which were largely attended. There was a library which prided donated Kannada books mostly patronised by bachelors and wives. A gymnasium was added for daily exercise being considered a must in Bombay to keep fit to earn enough.

It is surprising how many activities were compressed into a single room and that is Bombay Games were there too mostly indoor - chess, Carrom, draughts and the like, the exception being the Volley Ball in which the Association team had made an impression in Bombay.

Yugadi 1929 marked what to my mind was the most significant development in the history of the Association the starting of the Boarding section "The Mess" in a two-room tenement, Kitchen and dining hall at Rajubhai Building right opposite Matunga station. The provision of healthy wholesome meal to those in the process of making houses and those temporarily homeless has indeed been a boon.

The beginnings of the Mess are vivid in my memory as I sort of triggered its birth, since staying in Girgaum, lunch at Matunga-my work place was a problem. And so started the day-boarders of the mess with my friend and Colleague Dr. R. L. N. Iyengar (endearingly known as ABCD Iyengar in the Tennis Court), and friends in the neighbouring rooms-then known as the unemployed engineer's den, some of whom have later occupied highest positions in the profession, which made in all about a dozen to begin with. The elderly Achar who sometimes indulging in stargazing was fond of his flock and cooked and served a real homely meal restricting neither rice or chapati nor ghee or curds. The hostel proved a special blessing to young couples with domestic inconveniences.

With growing influx in that period of world depression and acute un-employment when people went with their own typewriters seeking positions, when Bombay was considered the only haven for jobs, the demand for boarding facilities. lodging was no problem then, was multiplying.

And so, the mess shifted into a more spacious accommodation in the Vejubhai building itself with more than 50 boarders. This further stimulated the activities since throughout the day every day, members willy nilly gathered together at the Association premises itself.

The hostel was completely autonomous run by its own Committees elected by and from among the boarders (who were of course members of the Association) with its independent Accounts. Dr. C. Nanjundayya, Late A. C. Krishnappa, R. Ramachandra, Late M. R. Narayan Rao were some of the active members of the mess whom I can recall at this distance of time. Purchase of provisions and vegetables was the privilege of the members and here, no praise is too high for the services of S. Nagarajan who worked with exemplary devotion visiting Byculla wholesale market every alternate early morning not hesitating to carry baskets, if need be, that was the hostel spirit.

In spite of Sunday's change and fortnightly feasts, the monthly boarders bill on a dividing system hardly exceeded Rs. 25/-, with all overheads including, vessel depreciation and bad debt reserves.

A special feature was the annual feast by the hostel on the Sunday following Ugadi to commensurate the inauguration when distinguished Mysoreans were invited to share our meal.

An interesting episode of Curd-Chapati battle in the hostel worth mentioning to illustrate the democratic set up of the hostel. While curds were optional on extra payment, chapatis were considered part of a meal. Non-Chapati eaters (who were quite a few) contended that Chapatis which are not part of a normal Mysore meal be made optional at extra cost or curds be served free for non-Chapati eaters, an alternative readily accepted by the majority.

And the Chefs. They became a part of the Association and looked after the boarders as their own kith and kin. Krishnappa followed Achar and then came Rammanna assisted by Raghavendra whose culinary and commercial expertise catapulted him to proprietorship of a prosperous hotel at Kings Circle, just a jamoons throw from the Association itself. I must here record a sharp, though short controversy, which disturbed the calm of the Association somewhere in the 30's at the peak of the civil Disobedience movement. While the Association

as a social and cultural center, were in tune with the emotionally charged national atmosphere. there were some political overtones. Members like Late G. A. Acharya strongly pleaded for not excluding political flavour in the activities while the President (as a public Servant) and some other favoured continuance of the non-political character. For a year Sri H. M. Gangadharaiah became President at the end of which Dewan Bahadur returned to lead the activities of the Association. It remained non-political.

The mess and I parted company in 1932 when I left for Gujarat. Back in Bombay in 1938, what a remarkable transformation I witnessed, six years were a period of continuous growth and expansion.

The Association had moved into its own habitation, a beautiful building (then only ground floor) with an inviting evergreen lawn where many members congregated to relax after a hard day's work and exchange gossip over a cup of coffee. It was a veritable beehive of activity with billiards and table tennis in full swing. Never before had the youngsters seen such amenities all next door to their residences available at such little cost.

Somewhere in 1939 there was a change of Sri R. D. Char in which I found myself as a treasurer with Nacchi inseparably interwoven with the Association since decades as Secretary and N. K. Iyengar and D. Ramanna (both out of our reach today) being members.

In this period by the courtesy of the corporation, a shuttle court was laid in the park behind the Association, an amenity well used by the early risers S. R. Rao, J. N. Iyer, M. B. Rao (how sad, all are beyond us today) and others including myself for the refreshing morning exercise. We were joined by R. D. Char and others on Sundays.

A major development during the period was the philosophical discourses given by the renowned and revered scholar Sriman Gopalachariar whose power of discourse and persuasive logic need a sizeable group in an enchanting spell which almost remouled their thoughts and approaches. What a splendid contribution by him to the enlightenment of Kannadigas of Bombay. Such have been the multifaced activities of the Association during the early decade and half during most of which I was privileged to be closely associated with it, the memory of which I cherish forever.

Let me say this, it was my work, the tennis court and the Association that made my stay in busy Bombay pleasant, happy and memorable so much so that given the chance. I would gladly relive it. In this I am sure I am echoing the feelings of many, if not all of us, who felt ourselves part of the Association in these delightful times, free from ques, rations and overcrowdings.

I have no doubt that with the multi-faceted activities of the Association in which so many youngmen and women are participating - as evidence by their superb display in enacting 'Bekkkina Kannu' in Bangalore with such evident joy, they share even more intensely the same feelings of pride and pleasure in being an integral part of it.

We look forward to the gold providing a fine setting to the approaching diamond to adorn the Association. May it live long and be a source of joy and comfort to every member from our state.

(Memoirs of an Ex-president from the inception of Association up to the Golden Jubilee Year)

# ಮಹಾಕುಂಭ ಮೇಳ-ಜನದನಿ



✍ **ಡಾ| ಸುಮಾ ದ್ವಾರಕಾನಾಥ್**

ಈ ಸಲ ಬೆಂಗಳೂರಿಗೆ ಹೋದಾಗ, ಗೆಳತಿ ಲೀಲನ ಹಿಂದೆ ಬಿದ್ದಿದ್ದೆ. ಆದಮ್ಯ ಚೇತನದಿಂದ ಅಯೋಧ್ಯೆ ಗೆ ಹೋಗುವ ಗುಂಪಿಗೆ ನನ್ನ ಹೆಸರು ಸೇರಿಸಲು ಲೀಲಳನ್ನು ಎಡತಾಕಿದ್ದೆ. ಈ ಸಲ ಕುಂಭಮೇಳಕ್ಕೆ ಹೋಗುವ ಪ್ಲಾನ್ ಇದೆಯೆಂದು ಸೂಚಿಸಿದ್ದಳು. ಸರಿ ಮೊಳಕೆಯೊಡೆಯಿತು ಆಸೆ. ನನ್ನ ಸ್ವಭಾವವೋ ಮೊದಲೇ ಊರೆಲ್ಲಾ ಸಾರಿಕೊಂಡು ಬಂದೆ. ಕೇಳಿದವರೆಲ್ಲರೂ ನಾನೂ ಜೊತೆಗೆ ಬರುತ್ತೇನೆಂದರು. ಕೊನೆಗೆ ನನ್ನ ಆರೋಗ್ಯ ತೀರ ಹಾಳಾಯಿತು. ಅಲ್ಲೇ ಹುಟ್ಟಿಬೆಳೆದವಳಾದರೂ ಅಲ್ಲಿಯ ಹವೆ ನನ್ನನ್ನು ತೀರ ನಿತ್ರಾಣವಾಗಿಸಿತು. ಸರಿ ಮಗನಿಗೆ ಹೇಳಿ ತಕ್ಷಣ ಟಿಕೆಟ್ ಮಾಡಿಸಿದ್ದಾಯ್ತು. ಲೀಲಳಿಗೂ ನನ್ನ ಅವಸ್ಥೆ ತಿಳಿಸಿ ಪ್ರಯಾಣವನ್ನು ರದ್ದುಗೊಳಿಸಿದೆ. ಮುಂಬಯಿಗೆ ಬಂದಮೇಲೆ ನನ್ನ ಆರೋಗ್ಯ ಸ್ವಲ್ಪ ಸುಧಾರಿಸಿತು. ಆ ವಾರದಲ್ಲಿ ಮಗ ಬಂದು ನಾವು ಕುಂಭಕ್ಕೆ ಹೋಗುವ ಪ್ಲಾನ್ ಇದೆ ಎಂದು ಹೇಳಿದ. ನನ್ನ ಆಸೆ ಮತ್ತೆ ಚಿಗುರಿತು. ವಿಮಾನ ಯಾನ ದುಬಾರಿಯಾದ್ದರಿಂದ ನಮ್ಮ ಕಾರಿನಲ್ಲೇ ಪ್ರಯಾಣ ಮಾಡುವುದು ಎಂದ. ಹಾಗಾದ್ರೆ ನನ್ನ ಪ್ರಯಾಣದ ವೆಚ್ಚವೇನೂ ಅವನ ಮೇಲೆ ಬೀಳುವುದಿಲ್ಲವೆಂದು ಸಮಾಧಾನ ಮಾಡಿಕೊಂಡೆ. ಇನ್ನು ಅಲ್ಲಿಯ ವಸತಿ. ಅವನ ಮೇಲಧಿಕಾರಿಯ ಊರು ಅದೇ ಆದ್ರಿಂದ ಅವನೊಂದು ಹೊಸ ಫ್ಲಾಟ್ ಮೂರು ತಿಂಗಳ ಹಿಂದೆ ಖರೀದಿಸಿದ್ದ. ಅದು ಖಾಲಿ ಇತ್ತು. ಊರ ಹೊರಗೆ ಸಂಗಮದ ಸಮೀಪವೇ ಇದ್ದುದು ಇನ್ನೊಂದು ವಿಶೇಷ. ಹಾಗಾಗಿ ಅಲ್ಲಿಗೆ ನನ್ನ ವಸತಿ ಸಮಸ್ಯೆಯೂ ಬಗೆ ಹರಿಯಿತು.

ಶನಿವಾರ ಬೆಳಗ್ಗೆಯೇ ೩೦ ತೇಪ್ಲಾಗಳನ್ನು ಕಟ್ಟಿಸಿಕೊಂಡು , ಚೂಡಾ , ಅವಲಕ್ಕಿ, ಬೇಸಿನ್ ಉಂಡೆ , ಹುರೀಟು ಇವುಗಳನ್ನು ದಾರಿಗೆ ಬುತ್ತಿಮಾಡಿಕೊಂಡು ಹೊರೆಟೆವು. ಮಗನಿಗೆ ತನ್ನ ಗಾಡಿಯ ಬಗ್ಗೆ ತುಂಬಾ ಅಭಿಮಾನ. ಮತ್ತು ಡ್ರೈವಿಂಗ್ passion ಹೀಗಾಗಿ ಮಹಾ ಸಮೃದ್ದಿಮಾರ್ಗನಲ್ಲಿ ನಾಗಪುರದವರೆಗೆ ಗಾಡಿ ಯನ್ನು ಓಡಿಸುವ ಹುಕಿ. ಜಬಲ್ಪುರ್ ವರೆಗೆ ಗಾಡಿ ಓಡಿಸಿ , ರಾತ್ರಿ ಗ್ರಾಂಡ್ ಎನ್ನುವ ಹೋಟೆಲ್ನಲ್ಲಿ ತಂಗಿದೆವು. ಬೆಳಗ್ಗೆ ಸ್ನಾನ ತಿಂಡಿ ಮುಗಿಸಿ ಸುಮಾರು ಹತ್ತೂವರೆಗೆ ಪ್ರಯಾಗ್ ಕಡೆಗೆ ಹೊರೆಟೆವು. ಹೋಟೆಲ್ನಲ್ಲಿ ಭೆಟ್ಟಿಯಾದ ಸೊಸೆಯ school prinicipal ತಾವು ೬ಗಂಟೆಗಳ ಕಾಲ traffic jam ಅನುಭವಿಸಿದ್ದಾಗಿ ಹೇಳಿದರು.

ಅಲ್ಲೀ ತನಕ ನಮ್ಮ ಪ್ರಯಾಣ ಯಾವ ಅಡ್ಡಿ ಆತಂಕಗಳಿಲ್ಲದೆ ಕಳೆಯಿತು. ಮುಂದೆ ಹೋಗುತ್ತಿದ್ದಂತೆ ಪೋಲೀಸರ ಕಂಟ್ರೋಲ್ ಗಮನಕ್ಕೆ ಬಂತು. ಚಿತ್ರಕೂಟ್ ಗೆ ಹೋಗುವ ಹೆದ್ದಾರಿಯಲ್ಲಿ, bypass ಮಾಡಿ ರೇವಾದಿಂದ ಸೀದಾ ಪ್ರಯಾಗಕ್ಕೇ ಸೇರುವ ಹೆದ್ದಾರಿಗೆ ನಮ್ಮ ವಾಹನಗಳನ್ನು ಬಿಟ್ಟರು. ಹಾಗಾಗಿ ವಾಹನಗಳು ಜಾಸ್ತಿಯಾಗಿ ಹತ್ತು ನಿಮಿಷ ಗಾಡಿ ಮುಂದೆ ಹೋದರೆ ಸುಮಾರು ಅರ್ಧಗಂಟೆ ನಿಲ್ಲಿಸಿಬಿಡುತ್ತಿದ್ದರು. ತಮಾಷೆಯೆಂದರೆ ನಮ್ಮ ಹಿಂದೆ ಮುಂದೆ ,ಕರ್ನಾಟಕದ ಗಾಡಿಗಳೇ ಹೆಚ್ಚುಇದ್ದವು. ವ್ಯಾನ್ ಗಳಲ್ಲೇ ಊಟದ ವ್ಯವಸ್ಥೆ ಮಾಡಿಕೊಂಡು , ಗಾಡಿ ನಿಂತಾಗ ಅಲ್ಲೇ ಕೂತು ಉಂಡು ಮುಂದುವರೆಯುತ್ತಿದ್ದರು. ಕೆಲವು ಹಳ್ಳಿಗಳಲ್ಲಿ ಮನೆಗಳಿಂದಲೇ ಚಾ, ತೊವ್ವೆ ಅನ್ನ, ಸಮೋಸ, ಪಕೋಡಾಗಳನ್ನು ತಕ್ಷಣ ತಯಾರಿಸಿ ಮಾರಾಟ ಮಾಡಿದರು. ಅವರ ತತ್ ಕ್ಷಣದ ಆಲೋಚನೆಗಳಿಂದ ಪ್ರಯಾಣಿಕರಿಗೂ ಸೌಲಭ್ಯ ಒದಗಿಸಿದ್ದು ಕಂಡು ಆಶ್ಚರ್ಯವಾಯಿತು.

ಸುಮಾರು ರೇವಾ ಇಂದ ಎರಡೂ ಮುಕ್ಕಾಲು – ಮೂರುಗಂಟೆಯೊಳಗೆ ಪ್ರಯಾಗ್ ರಾಜ್ ಗೆ ತಲುಪಬಹುದಾದ ದಾರಿಯನ್ನು ನಾವು ೧೨-೧೩ ಗಂಟೆಗಳ ಕಾಲ ಕ್ರಮಿಸಬೇಕಾಯಿತು. ಗಾಡಿಗಳಿಗೆ ಹೊರಗೆ ಬರಲು ದಾರಿಯೇ ಕಾಣದೆ ಒಂದರ ಹಿಂದೊಂದು ಸಾಗುವುದೇ ಅದರ ಪರ್ಯಾಯವಾಗಿತ್ತು. ಸರಿ ರಾತ್ರಿಯೆಲ್ಲಾ ಗಾಡಿ ನಿಂತಾಗ ತೂಕಡಿಸಿ, ಮುಂದಿನ ಗಾಡಿ ದೀಪ ಹತ್ತಿಕೊಂಡಾಗ ನಾವೂ ಎಚ್ಚರವಾಗಿ ಗಾಡಿ ಮುಂದೋಡಿಸುವುದು. ಹೇಗೋ ಅಂತೂ ಸುಖವಾಗಿ ತಲುಪಿದರೆ ಸಾಕು ಎನಿಸುತ್ತಿತ್ತು. ಮಗನ ಪಕ್ಕ ಕೂತು ದೇವರ ನಾಮಗಳನ್ನೆಲ್ಲಾ ಮೊಬೈಲಿನಲ್ಲಿ ಹಾಕಿ ಕೇಳಿದ್ದಾಯ್ತು.ನಮ್ಮ ಪುಣ್ಯ , ಬೆಳಕು ಹರಿಯುವ ಹೊತ್ತಿಗೆ ಪ್ರಯಾಗದ ದ್ವಾರದಲ್ಲಿ ಇದ್ದೆವು.

ಹಿಂದಿನ ರಾತ್ರಿಯಿಂದಲೇ ನಮಗೆ ನಮ್ಮ ವಸತಿ book ಮಾಡಿದ್ದವನಿಂದ ನಿರಂತರ ಫೋನ್. ನೀವು ಚಿತ್ರಕೂಟದಲ್ಲೇ ರಾತ್ರಿ ಉಳಿಯಿರಿ, ಝಾರ್ ಖಂಡ್ ನಿಂದ ೧೦೦೦ ಬಸ್ ಗಳಲ್ಲಿ ರಾಜಕಾರಣಿಗಳು ಬೆಳಗ್ಗೆ ಬರುತ್ತಿದ್ದಾರೆ, ನಿಮಗೆ ತೊಂದರೆಯಾಗಬಹುದು ಎಂದು. ಆದರೆ ನಮಗೆ ಹೊರಗೆ ಬರಲು ಸಾಧ್ಯವಾಗದ್ದರಿಂದ ರಾತ್ರಿಯೆಲ್ಲಾ ಗಾಡಿ ಓಡಿಸಿದ್ದೇ ಬಂತು. ನಮ್ಮ ಅದೃಷ್ಟ, ಪ್ರಯಾಗದ ಹೆಬ್ಬಾಗಿಲಿನಲ್ಲಿ ಯಾವ ತೊಂದರೆಯೂ ಆಗದೆ ಸೀದಾ ಊರೊಳಗೆ ಹೋದೆವು. ಅಂದು ಭಾರತದ ರಾಷ್ಟ್ರಪತಿ ಪ್ರಯಾಗಕ್ಕೆ ಬಂದದ್ದರಿಂದ , ವಿಶೇಷ ರಸ್ತೆಗಳನ್ನೆಲ್ಲಾ ತಾತ್ಕಾಲಿಕವಾಗಿ ಮುಚ್ಚಿದ್ದರು. ಅಂತೂ ಊರೆಲ್ಲಾ ಸುತ್ತಿ ಅವನು ಹೇಳಿದ ಜಾಗಕ್ಕೆ ಹೋದರೆ , ಈಗ ಬಂದೆ , ಆಗ ಬಂದೆ ಅಂತ ಸುಮಾರು ಹನ್ನೊಂದು ಗಂಟೆವರೆಗೆ ಸಬೂಬು ಹೇಳತೊಡಗಿದ. ನಮಗೋ ರಾತ್ರಿ ಪ್ರಯಾಣದ ಸುಸ್ತು, ಒಂದು ಲೋಟ ಕಾಫಿಯನ್ನೂ ಕುಡಿಯಲಾಗದೆ ಕಾದಿದ್ದೆವು. ಮಹಾಶಯ ೧೧-೧೧-

೩೦ ಹೊತ್ತಿಗೆ ಬಂದ. ಅವನ ಹಿಂದೆ ಒಂದೂವರೆ ಕಿ.ಮೀ ಹೋದಮೇಲೆ ಗಂಗಾ ನದಿಯ ಸಮೀಪವಿರುವ ಒಂದು ದೊಡ್ಡ ಕಾಂಪ್ಲೆಕ್ಸ್ ಗೆ ಕರೆದುಕೊಂಡು ಹೋದ. ಅಲ್ಲಿ ಕಾರು ನಿಲ್ಲಿಸಿ , ಮನೆಯೊಳಗೆ ಹೋದರೆ ವಿಶಾಲವಾದ ಹಾಲ್, ದೊಡ್ಡ ಅಡುಗೆ ಮನೆ , (ಒಂದು ಎಲೆಕ್ಟ್ರಿಕ್ ಸ್ಟೋವ್) ಎರಡೆರಡು ಮಂಚಹಾಕಿದ ಮೂರು ಬೆಡ್ ರೂಮ್ ಗಳು, ಸುತ್ತಲೂ ಬಾಲ್ಕನಿ ನೋಡಿ ಮನಸ್ಸಿಗೆ ಸಮಾಧಾನವಾಯಿತು. ಮಗನ ಗೆಳೆಯನ ಮನೆ ಆದ್ರೂ ದಲ್ಲಾಳಿ ಅವನಿಗೆ ತಿಳಿಸದೆ , ದಿನವೊಂದಕ್ಕೆ ೧೧,೦೦೦ ಬಾಡಿಗೆಗೆ ಕೊಡುತ್ತಿದ್ದ.ಮಗ ತನ್ನ ಗೆಳೆಯನ ಫ್ಲಾಟ್ ಎಲ್ಲಿ ಅಂತ ಕೇಳಿದಾಗ ಅದು ಬೇರೆಲ್ಲೋ ಇದೆ ಅಂತ ಸುಳ್ಳು ಹೇಳಿದ. ಮನೆ ಮುಂದೆ name plate ನೋಡಿ ಗೆಳೆಯನಿಗೆ ಫೋನ್ ಮಾಡಿದ್ರೆ , ಅದೇ ಅವನ ಮನೆಯೆಂದು ತಿಳಿಯಿತು. ದಲ್ಲಾಳಿ ಇವನ ಕೈಲೂ ಬಾಡಿಗೆ ಪಡೆದಿದ್ದ. ಅದನ್ನು ಆಮೇಲೆ ವಾಪಸ್ಸು ಮಾಡಿದ ಅನ್ನಿ. ಬೆಳಗ್ಗೆ ನಮ್ಮನ್ನು ಅಷ್ಟು ಹೊತ್ತು ಕಾಯಿಸಿದ್ದೂ , ಬೇರೆ ಗಿರಾಕಿಗೆ ಮನೆ ಕೊಟ್ಟಿದ್ದರಿಂದಲೇ ಎಂದು ನಮಗೆ ತಿಳಿಯಿತು. ಮನೆಯೊಳಗೆ ಕಾಲಿಟ್ಟರೆ , ಅವರು ತಿಂದ ತಿಂಡಿ, ಕಾಸಿ ಮಿಕ್ಕ ಹಾಲು ಎಲ್ಲಾ ಅಡುಗೆ ಕಟ್ಟೆ ತುಂಬಾ ಹರಡಿತ್ತು. ಎದುರು ಮನೆಯಲ್ಲಿ ಕೆಲಸ ಮಾಡುತ್ತಿದ್ದವರನ್ನು ಕರೆದು ಮನೆಯನ್ನು ಚೊಕ್ಕಟವಾಗಿ ಗುಡಿಸಿಸಿ , ಅಡುಗೆ ಕಟ್ಟೆಯನ್ನು ಸ್ವಚ್ಛ ಮಾಡಿಸಿದಳು. ತಕ್ಷಣ ಸ್ನಾನ ಮಾಡಿಕೊಂಡು ಹೊರಗಡೆ ಹೊರಟೆವು. ಹೊರಗಡೆ ಪರಿಸ್ಥಿತಿ ಹೇಗಿತ್ತೂ ಎಂದರೆ , ರಾಷ್ಟ್ರಪತಿಯ ಆಗಮನಕ್ಕಾಗಿ ರಸ್ತೆಗಳನ್ನೆಲ್ಲಾ ಬಂದ್ ಮಾಡಿ ಇತರ ವಾಹನಗಳನ್ನು ನಿಲ್ಲಿಸಿಬಿಟ್ಟಿದ್ದರು. ನಾವೇನೋ ಗಾಡಿಯನ್ನು ಸುರಕ್ಷಿತವಾಗಿ ಕಾಂಪ್ಲೆಕ್ಸ್ ನೊಳಗೆ ನಿಲ್ಲಿಸಿ ಹೊರಟೆವು. ಊರಲ್ಲಿ ನಮಗಿದ್ದ ಸಂಚಾರಿ ವಾಹನವೆಂದರೆ ಮೋಟರ್ ಬೈಕ್. ಸರಿ ಅದರಲ್ಲೇ ಹೋಗೋಣವೆಂದು ತೀರ್ಮಾನಿಸಿ ನಾಲ್ಕೂ ಜನವೂ ಮೂರು ವಾಹನಗಳನ್ನೇರಿದೆವು. ಅದೋ ಹಳ್ಳಕೊಳ್ಳಗಳನ್ನು ಇಳಿದು ಹತ್ತಿ, ದಾಟಿಸುತ್ತಾ ಇಕ್ಕಟ್ಟಾದ ಗಲ್ಲಿಗಲ್ಲಿಗಳಲ್ಲಿ ಸುತ್ತಿ ಗಂಗೆಯ ದಡ ತಲುಪಿಸಿತು. ಬದುಕಿದೆಯಾ ಬಡಜೀವವೇ ಅಂತ ಇಳಿದು ಜನಸಾಗರವನ್ನು ಸೇರಿಕೊಂಡೆವು. ಯಾವ ಆಹ್ವಾನವೂ ಇಲ್ಲದೆ ದೇಶವಿದೇಶದಿಂದಲೂ ಜನರು ಪ್ರವಾಹದ ರೀತಿಯಲ್ಲಿ ಸತತವಾಗಿ ಬರುತ್ತಲೇ ಇದ್ದರು. ಹಳ್ಳಿಗಳಿಂದಂತೂ ಹೆಂಗಸರು ಮಕ್ಕಳಾದಿಯಾಗಿ ತಲೆ ಮೇಲೆಒಂದು ಗಂಟು , ನೀರಿನ ಬಾಟಲ್ ಗಳನ್ನು ಹೊತ್ತು , ರಸ್ತೆಯ ಪಕ್ಕದಲ್ಲೇ ಮಲಗುವ ಅವರ ನಂಬಿಕೆಗಳಿಗೆ ನಮೋ ಎನ್ನಬೇಕಾಯ್ತು.

ಜನರಿಗೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಲು ಸುಮಾರು ೨೫ ಗೇಟ್ ಗಳನ್ನು , ೩೭ ಸೆಕ್ಟರ್ ಗಳನ್ನು, ತಾತ್ಕಾಲಿಕ ಸೇತುವೆಗಳನ್ನೂ ಯಮುನಾನದಿಯ ದಂಡೆಗೆ ಹಾಕಿದ್ದಾರೆ. ಅಲ್ಲಿಯ ವ್ಯವಸ್ಥೆ ನೋಡಿ ನಿಜವಾಗಲೂ ಮೂಗಿನ ಮೇಲೆ ಬೆರಳಿಡುವಂತಾಯಿತು. ಉಚಿತ ಆಸ್ಪತ್ರೆಗಳೇನು , ಆಂಬುಲೆನ್ಸ್ ಗಳೇನು, ಉಚಿತ ಊಟನೀಡುವ ಭಂಢಾರಗಳೇನು, ಕುಡಿಯುವ ನೀರಿನ ವ್ಯವಸ್ಥೆ, ತಪ್ಪಿಸಿಕೊಂಡವರ ಮಾಹಿತಿ ನೀಡುವ , ಜನಸಾಗರವನ್ನು ನಿಯಂತ್ರಿಸುವ ಪೋಲಿಸ್ ಪಡೆಗಳೇನು, ಮನೆಗಳ compound ನಲ್ಲೇ ಸುತ್ತ ಟೆಂಟ್ ಗಳನ್ನು ಎಬ್ಬಿಸಿ ಬಾಡಿಗೆ ಸಂಪಾದನೆ ಮಾಡುವ ಪರಿ ,ಒಂದೇ ಎರಡೇ ಸುಮಾರು ೪೫ ದಿವಸ , ೬೫ ಕೋಟಿ ಭಕ್ತರನ್ನು ಸಂಭಾಳಿಸುವ ಕೆಲಸ ಸಾಮಾನ್ಯ ಮಾನವರಿಂದ ಅಸಾಧ್ಯ ಎನ್ನಿಸಿತು. ಇಡೀ ರಸ್ತೆಯುದ್ದಕ್ಕೂ ಬಗೆಬಗೆಯ ಆಹಾರಗಳು ಸಿಗುತ್ತಿದ್ದರೂ ,ಪ್ರತಿಯೊಂದು ಅಂಗಡಿಯೂ ಜನರಿಂದ ಕಿಕ್ಕಿರಿದಿತ್ತು. ಸೊಸೆ, ಮೊಮ್ಮಗ ಸಿಕ್ಕ ಸಿಕ್ಕಲ್ಲೆಲ್ಲಾ ಪೂರಿ ,ಬಾಜಿ ಮಸ್ತ್ ಎಂದು enjoy ಮಾಡ್ತಿದ್ರು.

ಸಂಜೆ ಗಂಗಾ ಆರತಿಯನ್ನು, ಆರತಿ ಮಾಡುವವರ ಹತ್ತಿರದಲ್ಲೇ ನಿಂತು ನೋಡಿದ್ದಾಯಿತು. ಗಂಗಾ ಆರತಿ ನೋಡಲು ನಮಗೇನೂ ತೊಂದರೆಯಾಗಲಿಲ್ಲ. ದಾರಿಯಲ್ಲೇ ಸಿಕ್ಕ ತಿಂಡಿಯನ್ನು ತಿಂದು ರೂಮ್ ಗೆ ವಾಪಸ್ಸಾದೆವು. ಮಾರನೆ ದಿನ ಶಾಹಿ ಸ್ನಾನವಾದ್ದರಿಂದ ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು ಹೊರಡೋಣ ಎಂದು ಕೊಂಡೆವು. ಆದರೆ ಹಿಂದಿನ ದಿನ ನಿದ್ರೆ ಇಲ್ಲದ್ದರಿಂದ ಬೆಳಗ್ಗೆ ೭ಗಂಟೆಯ ತನಕ ಎಚ್ಚರವಾಗಲೇ ಇಲ್ಲ. ಮನೆಯಲ್ಲೇ ಕಾಫಿ ಕುಡಿದು ಹೊರಟೆವು. ಅಲ್ಲಿ ಹೋಗಿ ನೋಡಿದರೆ ಅವತ್ತು ೧೧ ಗಂಟೆವರೆಗೆ ದೋಣಿಗಳನ್ನು ನಿಲ್ಲಿಸಿಬಿಟ್ಟಿದ್ದರು. ಇಲ್ಲೇ ಗಂಗೆ ಯಮುನೆ ಸ್ನಾನ ಮಾಡಿ ಎಂದು ಜನಗಳಿಗೆ ಸೂಚನೆ ಕೊಡುತ್ತಿದ್ದರು. ಇನ್ನೇನು ಮಾಡೋದು ಅಂತ ಯಮುನೆಯ ದಡದಲ್ಲೇ ಸ್ನಾನ ಮಾಡಿದೆವು. ಅಷ್ಟುಹೊತ್ತಿಗೆ ದೋಣಿಗಳು ಹೊರಡುತ್ತಿರುವುದು ಕಾಣಿಸಿತು. ಆದರೆ ಸುಮಾರು ಒಂದು ಮೈಲಿ ದೂರ ಅಲ್ಲಿಗೆ ನಡೆಯಲೇಬೇಕಾಗಿತ್ತು. ಮರಳ ಮೇಲಾದ್ರಿಂದ ನಮಗೆ ನಡೆಯಲು ಅಷ್ಟು ಕಷ್ಟವಾಗಲಿಲ್ಲ.

ನಾವು ದೋಣಿ ಹತ್ತಿರ ಹೋಗುವುದಿರಲಿ, ಅವರೇ ಬಂದು ನಮ್ಮನ್ನು ಎಷ್ಟು ಜನ ಇದ್ದೀರಿ ಎಂದು ಕೇಳಿ ಕರೆಯುತ್ತಿದ್ದರು. ಸರಕಾರ ಒಬ್ಬರಿಗೆ ೬೦೦ ರೂ ಎಂದು ನಿಗದಿ ಪಡಿಸಿದ್ದರೂ ಮಧ್ಯೆಮಧ್ಯೆ ಅವರನ್ನು ನಿಯಂತ್ರಿಸುತ್ತಿದ್ದರಿಂದ ಬಾಯಿಗೆ ಬಂದ ಬೆಲೆ ಹೇಳುತ್ತಿದ್ದರು. ಜನಗಳಿಗೂ ಭಯ , ಯಾವಾಗ ಪೋಲೀಸರು ನಿಲ್ಲಿಸಿಬಿಡುತ್ತಾರೋ ಎಂದು. ಅಂತೂ ಚೌಕಾಸಿ ಮಾಡಿ ನಮ್ಮ ಮೂರೂವರೆ ಜನಕ್ಕೆ (ಮೊಮ್ಮಗ) ೫೦೦೦ ಕ್ಕೆ ಒಪ್ಪಿಸಿ ದೋಣಿಯಲ್ಲಿ ಕೂತಿದ್ದಾಯಿತು. ಮೊಮ್ಮಗನ ಖುಷಿಗೆ ಪಾರವೇ ಇಲ್ಲ. ನೀರಮೇಲೆ ಹಾರಾಡುತ್ತಿದ್ದ ಪಕ್ಷಿಗಳ ಫೋಟೊ ತೆಗೆದಿದ್ದಾಯ್ತು, ಗಂಗಾ ಯಮುನೆಯ ನೀರಿನ ಬೇರೆ ಬೇರೆ ಬಣ್ಣವನ್ನು ಗುರುತಿಸಿದ್ದಾಯ್ತು . ಅಂತೂ ಮೂರೂ ನದಿಗಳು ಸೇರುವ ಸಂಗಮ ಸ್ಥಾನವನ್ನು ತಲುಪಿದ್ದಾಯ್ತು. ಮತ್ತೆ ಅಲ್ಲಿಯ platform ಗಾಗಿ

ದುಡ್ಡು ಕೊಡಬೇಕಾಯ್ತು ನನಗಂತೂ ಮರಾಠಿ ಸಿನಿಮಾ ದೇವುಳ್ ನೆನಪು ಮೂಡಿಸುತ್ತಿತ್ತು. ಮಗ ಮೊದಲು ನನ್ನನ್ನು ಕರೆದುಕೊಂಡು ಹೋಗಿ ನೀರಿನಲ್ಲಿಳಿಸಿ , ಮೂರು ಸಲ ಮುಳುಗಿಸಿ ಕರೆದುಕೊಂಡು ಬಂದು ದೋಣಿಯೊಳಗೆ ಕೂಡಿಸಿದ. ನನ್ನ ಕುಂಭದ ಆಸೆ ಪೂರೈಸಿದ್ದಕ್ಕಾಗಿ ಮನಸ್ಸು ಆನಂದಗೊಂಡಿತ್ತು. ಆಮೇಲೆ ಅವರು ಮೂರು ಜನ ಸುಮಾರು ಅರ್ಧಗಂಟೆ ತನಕ ನೀರಿನಲ್ಲಿದ್ದು ಸುಮಾರು ೫೦ ಫೋಟೋ ಕ್ಲಿಕ್ಕಿಸಿಕೊಂಡರು. ದೋಣಿಯವನು ಮತ್ತೆ ನಮ್ಮನ್ನು ವಾಪಸ್ಸು ಕರೆದುಕೊಂಡು ಬರುವ ಮಾತು ಮೊದಲೇ ಆಗಿತ್ತು. ಆಗ ದೋಣಿಯವನು ಹೇಳಿದ ಮಾತೆಂದರೆ ವಾರಣಾಸಿಯಿಂದ ಸುಮಾರು ನೂರಾರು ಮೋಟರ್ ಬೋಟುಗಳನ್ನು ಸರಕಾರ ತರಿಸಿದ್ದರಿಂದ ಅವರಿಗೆ ನಷ್ಟವಾಗಿದೆ ಎಂದು. ನಾವು ಕೋಲಿನಿಂದ ಮೀಟುವ ದೋಣಿಯಲ್ಲೇ ಹೋಗಿ ಬಂದೆವು. ಅಷ್ಟು ಹೊತ್ತಿಗಾಗಲೇ ಹೊಟ್ಟೆಗೆ ಸಮಯದ ಪರಿವೆ ಇದ್ದುದರಿಂದ ಅಲ್ಲೇ ಸಿಕ್ಕ ಬೇಯಿಸಿದ ಮುಸುಕಿನ ಜೋಳ ತಿಂದು , ಲಸ್ಸಿ ಕುಡಿದು ಹೊಟ್ಟೆ ತುಂಬಿಸಿಕೊಂಡೆವು. ಮತ್ತೆ ಮೋಟರ್ ಬೈಕಿನಲ್ಲಿ ಮನೆಗೆ ಬಂದು ಸೇರಿದೆವು. ಕಾಲೇಜು ಹುಡುಗರೂ ತಮ್ಮ ಬೈಕುಗಳನ್ನು ಆದಾಯದ ಸಲುವಾಗಿ ಓಡಿಸುತ್ತಿದ್ದರು. ಇಡೀ ಊರಿನ ರಸ್ತೆಯಲ್ಲಿ ಬೇರೆಲ್ಲಾ ವಾಹನಗಳನ್ನು ರದ್ದು ಮಾಡಿದರೂ ,ಬೈಕು ಮಾತ್ರ ಜನರನ್ನು ಎಲ್ಲಿಗೆ ಬೇಕಾದರೂ ಕರೆದೊಯ್ಯುತ್ತಿತ್ತು. ಒಬ್ಬರಿಗೆ ೨೫೦-೩೦೦ ರೂ ಗಳವರೆಗೆ ಚಾರ್ಜ್ ಮಾಡಿ ಜೋಪಾನವಾಗಿ ಗಮ್ಯ ತಲುಪಿಸುತ್ತಿದ್ದರು.

ನದಿಯ ದಡದಲ್ಲಂತೂ ವ್ಯಾಪಾರ ಅನ್ನುವುದು ಯಾವ್ಯಾವ ರೂಪ ಪಡೆದಿತ್ತು ಎಂದು ನೋಡುವುದೇ ಒಂದು ಚಂದ. ಜನಗಳಿಗೆ ಒದ್ದೆಬಟ್ಟೆ ಇಟ್ಟು, ಒಣಬಟ್ಟೆ ಹಾಕಿಕೊಳ್ಳುವುದಕ್ಕೆ ಅಲ್ಲಲ್ಲಿ ಟೆಂಟ್ ಗಳನ್ನು ಹಾಕಿದ್ದರೂ , ಸುಮಾರು ೧೦\೧೦ ಅಡಿ ಪ್ಲಾಸ್ಟಿಕ್ ಶೀಟ್ ಗಳನ್ನು , ಮೊಬೈಲ್ ಚಾರ್ಜ್ ಮಾಡಲು ಅದಕ್ಕೊಂದು ಪರ್ಯಾಯ , ಹಲ್ಲುಜ್ಜಲು ಬೇವಿನ ಕಡ್ಡಿಗಳು, ಯಾವ ಮಾರ್ಕೆಟಿಂಗ್ ಮ್ಯಾನೇಜಮೆಂಟ್ ಗೂ ಕಡಿಮೆ ಇಲ್ಲದಂತೆ , ಸುಮಾರು ಎರಡು ತಿಂಗಳು ನಿರಂತರವಾಗಿ ಕುಂಭದ ಜಾತ್ರೆ ನಡೆಸಿದುದು ಜನರ ಮತ್ತು ಸರಕಾರದ ಛಲ.

ಸಂಜೆ ನದಿಯ ಆ ದಡದಲ್ಲಿರುವ ಅಖಾಡಾ ನೋಡಲು ಹೋದೆವು. ಅಲ್ಲಿ ಯಾರನ್ನು ಬಿಡದಿದ್ದುದರಿಂದ, ಹತ್ತಿರದಲ್ಲೇ ಆಂಧ್ರ ಪ್ರದೇಶದವರು ಮಾಡಿದ ಅಯೋಧ್ಯೆಯ ಮಂದಿರದ ಪ್ರತಿಕೃತಿ ಯಲ್ಲೇ ಶ್ರೀರಾಮನ ದರ್ಶನ ವಾಯಿತು. ಅಲ್ಲಿ ಕಾಲೇಜು ಹುಡುಗರು, ಹುಡುಗಿಯರು ಮಂದಿರಕ್ಕೆ ಬರುವ ಭಕ್ತರ ಗುಂಪನ್ನು ಸಂಭಾಳಿಸುತ್ತಿದ್ದರು. ನನಗೆ ಮಾಜಿ ಎಂದು ಹೇಳಿ ಕುರ್ಚಿ ಹಾಕಿ ಒಂದು ಪಕ್ಕದಲ್ಲಿ ಕೂಡಿಸಿದರು. ಇದೇ ಸಮಯ ಎಂದು ಮಗ, ಸೊಸೆ ಮೊಮ್ಮಗನನ್ನು ಕರೆದುಕೊಂಡು ಎರಡು ಕಿ.ಮೀ. ದೂರದಲ್ಲಿರುವ ಆಂಜನೇಯನ ಗುಡಿಗೆ ಹೋದರು. ಅಲ್ಲಿ ಮಲಗಿರುವ ಆಂಜನೇಯನ ಮಂದಿರ. ಸೌಗಂಧಿಕಾಪುಷ್ಪಕ್ಕಾಗಿ ಹೊರಟ ಭೀಮನನ್ನು ಭೇಟಿಯಾದ ಹನುಮಂತನ ಗುಡಿ. ಎಲ್ಲಕಡೆ ದೊಡ್ಡ ಕ್ಯೂ ಇದ್ದದ್ದರಿಂದ ಹಿಂದುಗಡೆ ಬಾಗಿಲಿನಿಂದ ದರ್ಶನ ಮಾಡಿ ಬಂದರು. ಅದುವರೆಗೂ ನಾನು ರಾಮಮಂದಿರದಲ್ಲೇ ಕೂತಿದ್ದೆ. ಮತ್ತೆ ನಮ್ಮ ಮುಂಬೈ ಚಾಟ್ಸ್ ತಿಂದು ವಾಪಸ್ಸಾದೆವು. ಕನಸಿನಲ್ಲೂ ಎಣಿಸಿರದಿದ್ದ ನಮ್ಮ ಕುಂಭ ಪ್ರವಾಸ ಸುಖರೂಪದಲ್ಲಿ ಮುಗಿದಿದ್ದಕ್ಕೆ ದೇವರಿಗೆ ಕೃತಜ್ಞತೆ ಅರ್ಪಿಸಿದ್ದಾಯ್ತು. ಮಾರನೆ ದಿನ ಬೆಳಗ್ಗೆ ಸ್ನಾನ ಮಾಡಿ ಊರು ಬಿಟ್ಟೆವು. ಮಧ್ಯಾನ್ಹದ ಹೊತ್ತಿಗೆ ಮಚಾಯ್ ಎನ್ನುವ ಒಂದು ಸುಸಜ್ಜಿತ ಡಾಭಾದಲ್ಲಿ ಒಳ್ಳೆಯ ಊಟ ಮಾಡಿದೆವು. ಮೂರು ದಿನದಿಂದ ಸಿಕ್ಕಿದ್ದನ್ನು ತಿಂದು ಕಾಲ ಕಳೆಯುತ್ತಿದ್ದ ನಮಗೆ ರುಚಿ ಶುಚಿಯಾದ ಕಿಚಡಿ , ಉಪ್ಪಿನಕಾಯಿ, ಲಸ್ಸಿ ಸಿಕ್ಕಿ ಎಲ್ಲರಿಗೂ ಒಳ್ಳೆ ಊಟ ಉಂಡ ಸಮಾಧಾನವಾಯಿತು.

ಮುಂದೆ ರಾತ್ರಿ ತನಕ ಪ್ರಯಾಣ ಮಾಡಿ ನಾಗಪುರದಲ್ಲಿ ಒಂದು ಹೋಟೆಲ್ ನಲ್ಲಿ ರಾತ್ರಿ ತಂಗಿ ಮುಂಬೈ ಗೆ ಮಹಾ ಸಮೃದ್ಧಿ ಮಾರ್ಗ ನಲ್ಲೇ ವಾಪಸ್ಸಾದೆವು. ಮಗನಿಗೆ ತನ್ನ ಗಾಡಿ ಬಗ್ಗೆ ಹೆಮ್ಮೆ , ಜೊತೆಗೆ ಹೈವೆ . ಹೋಗುವಾಗ ಖುಷಿಯಾಗಿ ಓಡಿಸಿಕೊಂಡು ಹೋಗಿದ್ದ. ಬರುವಾಗ ಪೋಲಿಸ್ ಮೊಬೈಲ್ ಚೆಕ್ ಮಾಡಿದ . ೨೦೦೦ ರೂ ದಂಡ ಹಾಕಿದ. ಇದನ್ನು ಕಂಡು ಸೊಸೆ ಮೊಮ್ಮಗ , ಮುಂದೆ ಗಾಡಿ ಸ್ಪೀಡ್ ಮೀರದಿರುವ ಹಾಗೆ ನೋಡಿಕೊಂಡರು. ಬರುವಾಗ ಯಾವ ಅಡ್ಡಿ ಆತಂಕಗಳಿಲ್ಲದೆ ಸಂಜೆ ೭ ಗಂಟೆ ಹೊತ್ತಿಗೆ ಮನೆ ಮುಟ್ಟಿದೆವು.

ಮಹಾ ಕುಂಭ ಮೇಳವನ್ನು ಒಮ್ಮೆ ನೋಡಿ ಬಂದ ಮೇಲೆ ಮನಸ್ಸಿಗೆ ಪ್ರಾಮಾಣಿಕವಾಗಿ ಅನಿಸಿದ್ದೇನೆಂದರೆ ರಾಜಕಾರಣಿಗಳ ಉದ್ದೇಶ ಏನೇ ಇರಲಿ, ಹಿಂದೂ ಜನರ ಮನಸ್ಸಿನ ಧಾರ್ಮಿಕ ನಂಬಿಕೆಯನ್ನು ವಾರಣಾಸಿ, ಅಯೋಧ್ಯೆ, ಕುಂಭ ಮೇಳ ದ ಮೂಲಕ ಉತ್ತೇಜಿಸಿರಬಹುದೇ ಎಂಬ ಅಭಿಪ್ರಾಯವೂ ಮೂಡುತ್ತದೆ. ವಸುಧೇಂದ್ರ ಅವರ **ರೇಷ್ಮೆ ಬಟ್ಟೆ** ಕಾದಂಬರಿಯೂ ಕಾನಿಷ್ಕನ ಕಾಲದ ಚಿತ್ರಣ ಕೊಡುವಾಗ ,ಧಾರ್ಮಿಕತೆಯನ್ನು ವ್ಯಾಪಾರೀಕರಣಕ್ಕೆ ದಾಳವಾಗಿ ಬಳಸಿಕೊಂಡ ಉದಾಹರಣೆ ಚರಿತ್ರೆಯಲ್ಲಿ ಸಿಗುತ್ತದೆ. ಉತ್ತರ ಪ್ರದೇಶದಲ್ಲಿ ಐ.ಟಿ, ಬಿ.ಟಿಯ ಕೊರತೆ ಇರುವಾಗ ಈ ಧಾರ್ಮಿಕತೆಯೂ , ರಾಜ್ಯದ ಆರ್ಥಿಕ ಸುಧಾರಣೆಗೆ ಕುಮ್ಮಕ್ಕು ಕೊಟ್ಟಿರಬಹುದೇ ಎಂಬ ಸಣ್ಣ ಅನುಮಾನವನ್ನು ವ್ಯಕ್ತ ಪಡಿಸಿದವರೂ ಇದ್ದಾರೆ. ಕೊಟ್ಟಕೊನೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಂತೆ ಯಾರು ಏನನ್ನು ಹುಡುಕಿದರೋ ಅವರಿಗೆ ಅವರು ಹುಡುಕಿದ್ದೇ ಸಿಕ್ಕಿದೆ.

## ಅಸೋಸಿಯೇಷನ್ನಿನಲ್ಲಿ ಮುಂಬರುವ ಕಾರ್ಯಕ್ರಮಗಳು

**ಬುಧವಾರ, ಎಪ್ರಿಲ್ 30, 2025 ಸಂಜೆ 5.30ರಿಂದ**



# ಅಕ್ಷಯ ತೃತೀಯ ಪೂಜೆ

**ಭಜನೆ ಹಾಗೂ ಪ್ರಸಾದ ವಿನಿಯೋಗ.**

**ಶ್ರೀ ಗಣಪತಿ ಸ್ಥಾಪನೆಯಾಗಿ 30 ವರ್ಷವಾಗುತ್ತದೆ.**

**Sunday, May 25, 2025 at 6.30 p.m.**

## Dance Programme

# "SANGEETA SAMRUDDHI"

*by*

## *Smt. Priya Mohan & Troupe*

**(Daughter of our member Sri S. V. Mohan & Triveni)**

**Samudhbhava Dance School, Bengaluru.**

**at Mysore Association's Auditorium.**






ಎಪ್ರಿಲ್ 6, 2025ರ ಸಂಜೆ ರಾಮ ನವಮಿ ಪೂಜೆಯನ್ನು ಉತ್ಸಾಹದಿಂದ ಆಚರಿಸಲಾಯಿತು.
ಭಕ್ತಾದಿಗಳು ಮಂಗಳಾರತಿ ಮತ್ತು ಮಹಾಪ್ರಸಾದ ಮಂಗಳಾರತಿ ಸ್ವೀಕರಿಸಿದರು.

# ಮೈಸೂರು ಅಸೋಸಿಯೇಷನ್, ಮುಂಬೈ

## ಶತಮಾನೋತ್ಸವ ಮತ್ತು ಸ್ಥಾಪನಾ ದಿನಾಚರಣೆಯ ನಿಮಿತ್ತ

# 'ಸುಗಮ ಸಂಗೀತ'

### ಹೆಸರಾಂತ ಸಂಗೀತ ಕಲಾವಿದ ಡಾ. ಸಿ. ಅಶ್ವಥ್ ಅವರ ನೆನಪಿನಲ್ಲಿ




ಕಾರ್ಯಕ್ರಮ ವಿನ್ಯಾಸ : ಶ್ರೀ ರಾಮಚಂದ್ರ ಹಡಪದ್

ಹಾಡುಗಾರಿಕೆ : ಸ್ಪರ್ಶ, ಶ್ರುತಿ ವಿ. ಎಸ್., ಮೇಘನಾ ಕುಂದಾಪುರ

ಸಹಯೋಗ : ಶ್ರೀ ಪ್ರಕಾಶ್ ಬೆಳವಾಡಿ

ಸಂಘಟನೆ : ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ

**ಭಾನುವಾರ, ಏಪ್ರಿಲ್ 27, 2025 ಸಂಜೆ 6.30**

ಸ್ಥಳ : ಮೈಸೂರು ಅಸೋಸಿಯೇಷನ್, ಮುಂಬೈ ಸಭಾಗೃಹ, 393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬೈ – 400 019

ಎಲ್ಲರಿಗೂ ನಲು ಬರುವು

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077